# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 115

## ದೈತ್ಯರಲ್ಲಿ ದೇವರ ಭಕ್ತರಿದ್ದಾರೆಯೇ?

ಹರೇ ಶ್ರೀನಿವಾಸ ನಮಸ್ಕಾರಗಳು ಆಚಾರ್ಯರೇ, ದೈತ್ಯರಲ್ಲೂ ಭಗವದ್ಭಕ್ತರುಂಟೇ, ಇಲ್ಲವಾದಲ್ಲಿ ಅವರು by default ಶ್ರೀಹರಿ ವಾಯು ಗುರುಗಳ ಪ್ರತಿಯಾಗಿ ದ್ವೇಷ ಉಳ್ಳವರೇ ಅದಕ್ಕೇನಾದರೂ ಪುರಾಣಗಳ ಪ್ರಕಾರ ನಿರ್ದಿಷ್ಟವಾದ ಕಾರಣವುಂಟೇ? ದಯೆಯಿಂದ ತಿಳಿಸಿ ಆಚಾರ್ಯರೇ.  ಧನ್ಯವಾದಗಳು

– ನಾಗರಾಜ ಶರ್ಮ

## ದೈತ್ಯ ಶಬ್ದದ ಅರ್ಥ

ನಿಮ್ಮ ಪ್ರಶ್ನೆಗೆ ನೇರ ಉತ್ತರ, ದೈತ್ಯರಲ್ಲಿ ಭಗವದ್ಭಕ್ತರೂ ಇದ್ದಾರೆ. ಹೆಚ್ಚಿನಂಶ ಭಗವದ್ ದ್ವೇಷಿಗಳೇ ಇದ್ದಾರೆ.

ಆದರೆ ಅಧಮಜೀವರಲ್ಲಿ ಭಗವದ್ಭಕ್ತರಿಲ್ಲ. ಭಗವದ್ಭಕ್ತರಾದರೆ ಅವರು ಅಧಮಜೀವರಲ್ಲ.

ಈಗ ವಿವರಿಸುತ್ತೇನೆ.

ದೈತ್ಯ ಎನ್ನುವ ಶಬ್ದಕ್ಕೆ ದಿತಿಯ ಮಕ್ಕಳು ಎಂದರ್ಥ. ಕಶ್ಯಪರ ಪತ್ನಿ, ದಿತಿದೇವಿ. ಅವರ ಮಕ್ಕಳು ದೈತ್ಯರು. ಆ ದೈತ್ಯರ ಮಕ್ಕಳಾಗಿ ಹುಟ್ಟಿ ಬರುವವರೂ ದೈತ್ಯರು.

ಇದರೊಟ್ಟಿಗೆ ಜೀವರಲ್ಲಿ ಇರುವ ವಿಭಾಗವನ್ನು ಅರ್ಥ ಮಾಡಿಕೊಳ್ಳಬೇಕು.  ಜೀವರಲ್ಲಿ ಮೂರು ವಿಧ.

ಉತ್ತಮರು, ಮಧ್ಯಮರು, ಅಧಮರು ಎಂದು.

ದೇವರಲ್ಲಿ ಭಕ್ತಿ ಮಾಡಿ ಅವನ ಅನುಗ್ರಹವನ್ನು ಪಡೆದು ಅನಂತ ಸುಖರೂಪವಾದ ಮುಕ್ತಿಯನ್ನು ಪಡೆಯುವವರು ಉತ್ತಮರು. ಭಕ್ತಿ ಇವರ ಸ್ವಭಾವದಲ್ಲಿಯೇ ಇದೆ.

ದೇವರಲ್ಲಿ ದ್ವೇಷ ಮಾಡಿ ಅವನ ಅನುಗ್ರಹವನ್ನು ಪಡೆದು ಅನಂತ ದುಃಖರೂಪವಾದ ತಮಸ್ಸನ್ನು ಪಡೆಯುವವರು ಅಧಮರು. ದ್ವೇಷ ಅವರ ಸ್ವಭಾವದಲ್ಲಿಯೇ ಇದೆ.

ದೇವರಲ್ಲಿ ಭಕ್ತಿಯನ್ನೂ ಮಾಡದೆ, ದ್ವೇಷವನ್ನೂ ಮಾಡದೆ ಶಾಶ್ವತವಾಗಿ ಸಂಸಾರದಲ್ಲಿಯೇ ಇರುವವರು ಮಧ್ಯಮರು. ದೇವರ ಕುರಿತ ಉದಾಸೀನತೆ ಅವರ ಸ್ವಭಾವದಲ್ಲಿಯೇ ಇದೆ.

ಈ ಮೂರೂ ವಿಧದ ಜೀವರ ಸ್ವಭಾವದ ಅಭಿವ್ಯಕ್ತಿಗಾಗಿ ದೇವರು ಅವರನ್ನು ಸೃಷ್ಟಿ ಮಾಡುತ್ತಾನೆ.

ಭಕ್ತಿಯ ಅಭಿವ್ಯಕ್ತಿಯಾಗಲು ಸತ್ವಗುಣ ಬೇಕು.
ಉದಾಸೀನತೆ ರಜೋಗುಣದಿಂದ.
ದೇವರ ದ್ವೇಷ ತಮೋಗುಣದಿಂದ ಉಂಟಾಗುತ್ತದೆ.

ಉತ್ತಮನಾದ ವ್ಯಕ್ತಿಯೂ ತನ್ನ ಕರ್ಮಗಳ ಅನುಸಾರಾವಗಿ ದೈತ್ಯರ ಕುಲದಲ್ಲಿ ಹುಟ್ಟಿಬರಬಲ್ಲ. ಪ್ರಹ್ಲಾದರಾಜರು, ಬಲಿಮಹಾರಾಜರು ಹುಟ್ಟಿಬಂದತೆ.

ದಿತಿಯ ಮಗ ಹಿರಣ್ಯಕಶಿಪು. ಅವನ ಮಗ ಪ್ರಹ್ಲಾದರಾಜರು. ಹೀಗಾಗಿ ಅವರು ದೈತ್ಯರೇ. ಆದರೆ ತಾಮಸರಲ್ಲ.

ಆ ಪ್ರಹ್ಲಾದರಾಜರ ಮೊಮ್ಮಗ ಬಲಿಮಹಾರಾಜರು. ದೈತ್ಯರೇ. ಆದರೆ ತಾಮಸರಲ್ಲ. ದೇವರ ಭಕ್ತರು.

ಅಧಮನಾದ ವ್ಯಕ್ತಿಯೂ ದೊಡ್ಡವರ ಕುಲದಲ್ಲಿ ಹುಟ್ಟಿ ಬರಬಲ್ಲ. ಶ್ರೇಷ್ಠವಾದ ಕುರುಗಳ ವಂಶದಲ್ಲಿ ದುರ್ಯೋಧನಾದಿಗಳು ಹುಟ್ಟಿ ಬಂದಂತೆ. ಧ್ರುವರಾಜರ ವಂಶದಲ್ಲಿ ವೇನ ಹುಟ್ಟಿ ಬಂದಂತೆ.

ದುರ್ಯೋಧನ, ವೇನ ಮುಂತಾದವರು ಸ್ವಾಭಾವಿಕವಾಗಿ ತಾಮಸರು. ಹೀಗಾಗಿ ಅವರು ದೇವರ ಭಕ್ತರಲ್ಲ. ಆದರೆ ಉತ್ತಮ ಕುಲದಲ್ಲಿ ಹುಟ್ಟಿ ಬಂದಿದ್ದಾರೆ.

ಕಲಿಯುಗದಲ್ಲಿ ಬ್ರಾಹ್ಮಣರ ಮಧ್ಯದಲ್ಲಿಯೇ ತಾಮಸರು ಹುಟ್ಟಿ ಬರುವದು ಎಂದು ಪ್ರಾಚೀನರ ವಚನವಿದೆ.

**ರಾಕ್ಷಸಾಃ ಕಲಿಮಾಶ್ರಿತ್ಯ**
**ಜಾಯಂತೇ ಬ್ರಹ್ಮಯೋನಿಷು ।**
**ಬ್ರಾಹ್ಮಣಾನೇವ ಬಾಧಂತೇ**
**ತತ್ರಾಪಿ ಶ್ರೋತ್ರಿಯಾನ್ ಕೃಶಾನ್ ।।**

ಕಲಿಯ ಬೆಂಬಲ ಪಡೆದ ರಾಕ್ಷಸರು ಬ್ರಾಹ್ಮಣರಾಗಿಯೇ ಹುಟ್ಟುತ್ತಾರೆ. ಹುಟ್ಟಿ ಬ್ರಾಹ್ಮಣರಿಗೇ ತೊಂದರೆ ಕೊಡುತ್ತಾರೆ. ಅದರಲ್ಲಿಯೂ ದುರ್ಬಲರಾದ ಶ್ರೋತ್ರಿಯರನ್ನು ವಿಪರೀತವಾಗಿ ಹಿಂಸಿಸುತ್ತಾರೆ.

ಮಹಾಭಾರತ ಕಾಲದಲ್ಲಿ ಜಟಾಸುರ ಎಂದೊಬ್ಬ ರಾಕ್ಷಸನಿದ್ದ. ಋಷಿಗಳಂತೆ ದೊಡ್ಡದಾಗಿ ಜಟೆಯನ್ನು ಬಿಟ್ಟು ಮಹಾಬ್ರಾಹ್ಮಣನಂತೆ ಬದುಕುತ್ತ ತೀರ್ಥಯಾತ್ರೆಗೆ ಬಂದ ಬ್ರಾಹ್ಮಣರನ್ನು ಕೊಲ್ಲುತ್ತಿದ್ದ. ಪಾಂಡವರ ತೀರ್ಥಯಾತ್ರೆಯ ಕಾಲದಲ್ಲಿ

ಪಾಂಡವರನ್ನೇ ಕೊಲ್ಲ ಬಂದಾಗ ಭೀಮಸೇನ ಅವನನ್ನು ಸಂಹಾರ ಮಾಡುತ್ತಾನೆ.

ಹೀಗೆ ಬ್ರಾಹ್ಮಣನಾದ ಮಾತ್ರಕ್ಕೆ ಅವನು ಉತ್ತಮ ಎಂದಲ್ಲ. ಬ್ರಾಹ್ಮಣರಲ್ಲಿಯೂ ತಾಮಸರಿದ್ದಾರೆ. ರಾಕ್ಷಸ ಎಂದಾದ ಮಾತ್ರಕ್ಕೆ ಅವನು ತಾಮಸ ಎಂದಲ್ಲ, ರಾಕ್ಷಸರಲ್ಲಿಯೂ ಭಗವದ್ಭಕ್ತರಿದ್ದಾರೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ದೈತ್ಯ, ರಾಕ್ಷಸ, ಪಿಶಾಚ ಇವೆಲ್ಲವೂ ಒಂದೊಂದು ಯೋನಿಗಳಷ್ಟೆ. ಇಂತಹ ಯೋನಿಗಳಲ್ಲಿ ಹುಟ್ಟಿದವರೆಲ್ಲ ತಾಮಸರು, ಇಂತಹ ಯೋನಿಗಳಲ್ಲಿ ಹುಟ್ಟಿದವರೆಲ್ಲ ಉತ್ತಮರು ಎಂದಿಲ್ಲ.

— ವಿಷ್ಣುದಾಸ ನಾಗೇಂದ್ರಾಚಾರ್ಯ